


ಒಬ್ಬರನ್ನೊಬ್ಬರು ಕೊಂದುಕೊಳ್ಳುವ ಹಿಂಸೆ ದೂರದಲ್ಲೆಲ್ಲೋ ನಡೆಯುವ ವಿದ್ಯಮಾನ ಎಂದುಕೊಳ್ಳುವ ಕಾಲ ಇದಲ್ಲ. ಹಿತ್ತಲಲ್ಲಿ, ನೆರೆಹೊರೆಯಲ್ಲಿ ಹಿಂಸೆ ಕ್ರೌರ್ಯ ಘಟಿಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಪ್ರೀತಿ, ವಿಶ್ವಾಸ, ಗೌರವದ ತಳಹದಿಯಲ್ಲಿ ಗಟ್ಟಿಯಾಗಿರುತ್ತಿದ್ದ ದಾಂಪತ್ಯದ ಸಾಂಗತ್ಯದಲ್ಲಿ ಅಪಸ್ವರ, ವಿಶ್ವಾಸದ್ರೋಹ ಸಹಜ ಎನ್ನುವಂತಾಗಿದೆ. ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು, ಹೆತ್ತವರು ಮಕ್ಕಳನ್ನು, ಮಕ್ಕಳು ಹೆತ್ತವರನ್ನು ಕೊಲ್ಲುವ ಪ್ರಕರಣಗಳು ವರದಿಯಾಗುತ್ತಿವೆ. ಪ್ರೀತಿಪಾತ್ರರ ದೇಹವನ್ನು ತುಂಡುತುಂಡಾಗಿ ಕತ್ತರಿಸಿ ಬಿಸುಡುವ ಪಾಷಾಣ ಹೃದಯಿಗಳೂ ಇದ್ದಾರೆ. ಈ ಹಿಂಸೆ, ಕ್ರೌರ್ಯವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಮಾತುಕತೆಯ ಮೂಲಕ ಬಗೆಹರಿಯಬಹುದಾದ ಸಮಸ್ಯೆಗಳು ಕೊಂದುಕೊಳ್ಳುವವರೆಗೆ ಹೋಗುತ್ತಿರುವುದು ಯಾಕೆ? ಅನುರಾಗದ ಆರ್ದ್ರತೆಯೊಂದಿಗೆ ಕೂಡಿ ಬಾಳುವುದರಲ್ಲಿ ಆನಂದ ಕಾಣುತ್ತಿದ್ದ, ವಿಶ್ವದ ಅಚ್ಚರಿಗೆ ಕಾರಣವಾಗಿದ್ದ ಭಾರತದ ಕೌಟುಂಬಿಕ ಪದ್ಧತಿ ಹಳಿ ತಪ್ಪಿದೆಯೆ? ಹಿಂಸೆಯ ವರ್ತುಲದಿಂದ ಬಿಡುಗಡೆಯೇ ಇಲ್ಲವೇ? ಈ ಪ್ರಶ್ನೆಗಳನ್ನು ಎದೆಯಿಂದ ಎದೆಗೆ ದಾಟಿಸುವ ಹಂಬಲದಲ್ಲಿ ಈ ಸಂಚಿಕೆಯ ಮುಖಪುಟ ಬರಹ ರೂಪುಗೊಂಡಿದೆ.

# ಪ್ರೀತಿಪಾತ್ರರನ್ನು ಕೊಲ್ಲುವಷ್ಟು ವ್ಯಕ್ತಿ ಕ್ರೂರಿ ಆಗುತ್ತಿರುವುದೇಕೆ?